P.W. 1

(ಇಂದು ದಿನಾಂಕ 20-11-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

(ಸಾಕ್ಷಿದಾರರು ಕೊಂಕಣಿ ಭಾಷೆ ಮಾತನಾಡುವವರಾಗಿದ್ದರಿಂದ ವಕೀಲರಾಗಿರುವ ಶ್ರೀ ಎಸ್.ಪಿ.ಜಿ. ವಕೀಲರನ್ನು ಕನ್ನಡ ಭಾಷೆಗೆ ಭಾಷಾಂತರ ಮಾಡಲು ನೇಮಿಸಿಕೊಳ್ಳಲಾಯಿತು.)

**ಮುಂದುವರಿದ ಮುಖ್ಯ ವಿಚಾರಣೆಃ ಫಿರ್ಯಾದಿದಾರರ ಪರ ಶ್ರೀ ವಿ.ಜಿ.ಎ. ವಕೀಲರಿಂದಃ**

ನಾನು ಈ ಹಿಂದೆ ನನ್ನ ಪ್ರಮಾಣಪೂರ್ವಕ ಹೇಳಿಕೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು, ಅದನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಅಳವಡಿಸಿಕೊಳ್ಳಲು ಮೆಮೊ ಸಲ್ಲಿಸಿರುತ್ತೇನೆ.

ನಾನು ಖಾಸಗಿ ಫಿರ್ಯಾದಿಯೊಂದಿಗೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಗೆ ಸೇರಿದಂತಹ ದಿನಾಂಕ 18-11-2022 ರ ಎರಡು ಚೆಕ್ಕಗಳನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.1 ಮತ್ತು ನಿ.ಪಿ.1 ಎಂದು ಗುರುತಿಸಲಾಯಿತು. ಸದರಿ ಚೆಕ್ಕಿಗೆ ಆರೋಪಿ ಸಹಿ ಹಾಕಿದ್ದು ಅದನ್ನು ನೋಡಿ ಗುರುತಿಸಿದ್ದಾರೆ. ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿ.ಪಿ.1(ಎ) ಮತ್ತು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಬ್ಯಾಂಕಿನವರು ಕೊಟ್ಟ ಎರಡು ಹಿಂಬರಗಳನ್ನು ನಿ.ಪಿ.3 ಮತ್ತು ನಿ.ಪಿ.4 ಎಂದು, ಆರೋಪಿಗೆ ಕೊಟ್ಟಂತಹ ಲೀಗಲ್ ನೋಟಿಸ್‌ನ ಕಚೇರಿ ಪ್ರತಿ ನಿ.ಪಿ.5 ಎಂದು, ಜಾರಿಯಾಗದೇ ಮರಳಿ ಬಂದ ಅಂಚೆ ಲಕೋಟೆಯನ್ನು ನಿ.ಪಿ.6 ಎಂದು, ಅಂಚೆ ರಶೀದಿಯನ್ನು ನಿ.ಪಿ. 7 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಹಾಜರಿದ್ದು ಪಾಟೀ ಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾಯಿಕ ದಂ. ಕಾರವಾರ